Sri M. LINGANNA (Nanjangud).—Sir, when I read first the amending Bill along with the principal Act of 1948, I was much impressed by two of the amendments proposed to be made to original Act. But before going to the two particular amendments I have in view, I want to observe generally about the effect of this particular amending Bill which Government have brought forward. Sir, this is one of the most ingenious methods by which many Governments have sought to make a particular section of the community in the State to be its tax-collector. It was rightly observed by one of my friends that the tax-collector being a citizen of the State, we have to take the highest responsibility while making him an indirect agent of the Government to collect the tax. We have also to consider the way in which we have to make use of him and the extent of responsibility and the extent of liability that we have to throw on his shoulders. Sir, the Sales Tax Act when it was introduced in 1948 October I believe, the main or the paramount interest of the Government was to make up the losses that it would incur by the adoption of prohibition policy in the State. But that apart, Sir, the Sales Tax Act and its operation in the State for nearly six years probably has given us not a good tale of its own, because the report that is being placed before us is an evidence which goes to show that there are several lacunæ in the measure and lots of difficulties were being undergone by the merchant community which we have sought to employ as the agency to collect this tax. Sir, it was good that the Government thought fit to form a Committe to go into this very tax-structure and also to report as to the ways in

(SRI M. LINGANNA.)

which the original Act of 1948 has to be amended taking into consideration all the circumstances and the evidence that they would collect from individuals or from representatives of institutions. Sir, the Statement of Objects and Reasons literally states that this amending Bill has been brought forth as per the recommendations of the Mysore Sales Tax Committee of 1954. But the Sales Tax Committee which went in detail into this question has, of course, tried to deviate from the original method of collecting the sales-tax in the State of Mysore and it has introduced a novel method of slab system and also it has sought to introduce only single point levy on certain articles. It has probably found out a new method of dealing with people who try to evade taxation. Government have reduced in a way the level from which taxes are to be levied from that of ten thousand to seven thousand five hundred. Sir, when I read the amending Bill I was most pained to see that Government have amended section 18 of the principal Act in such a way as to penalise this particular citizen in whom we have so much of confidence, because we are entrusting him with the work of collecting taxes. What is the responsibility with which he has been entrusted? What is the remuneration he gets for this work? He is only a tax collector. It is the consumer who is going to purchase something that pays the tax. Here, the responsibility of the dealer is only restricted to this particular point of collecting tax and I am afraid the enlargement of section 18 is not warranted. Section 18 of the original Act reads thus:

"18 (1) Any officer empowered by the Government in this behalf, may for the purpose of this Act, require any dealer carrying on business in any kind of goods to produce before him the accounts and other documents, and to furnish any other information relating to such business.

"(2) All accounts and registers maintained by dealers in the ordinary course of their business, the goods in their possession and their offices, shops, godowns, vessels or vehicles shall be open to inspection at all reasonable times by such officers as may be authorised in this behalf.

"(3) Any such officer shall have power to enter, for the purpose referred to in sub-section (2), any office, shop, godown, vessel, vehicle or any other place in which business is done."

Here, the officer has been empowered by Government to inspect several documents relating to a business man, to enter into the shops, of course, at reasonable times and also to inspect them. Here I want to bring to the notice of the august House section 20. It reads thus:

Any person who—

(*a*) wilfully submits an untrue return or fails to submit a return as required by the provisions of this Act or the rules made thereunder, or

(*b*) * * *

(*c*) prevents or obstructs inspection or entry by any officer authorised under section 18, in contravention of the terms thereof, or......"

Sir, such a person can be prosecuted before a Magistrate as per the original Act. This particular amendment seeks to further empower Government officers and this is rather uncalled for. I believe......

Sri Kadidal MANJAPPA.—Everything is uncalled for.

Sri M. LINGANNA.—Why I say this is uncalled for is for the reason that section 20 of the principal Act itself empowers that if a particular business man does not allow an officer to enter into his shop for inspection of documents or goods or stock that he can hold then he can be prosecuted. So, Sir, where is the necessity to amplify this particular section further? This

amplified section further penalises a particular citizen who is entrusted with this noble task of tax-collecting for the State. Now it is amplified and it says—" Enter, inspect and seize." This word ' seizure ' is further amplified in sub-sections (3) and (4).

> " 18 (3) If any such officer has reason to suspect that any dealer is attempting to evade the payment of any tax due from him under this Act, he may, for reasons to be recorded in writing, seize such accounts, registers or documents of the dealer as may be necessary, and shall grant a receipt for the same, and shall retain the same only for so long as may be necessary for examination thereof or for a prosecution."
>
> (4) For the purposes of sub-section (2) or sub-section (3) such officer shall have power to enter and search any place of business, warehouse, office, shop, godown, vessel, vehicle or any other place where such officer has reason to believe that the dealer keeps or is for the time being keeping any accounts, registers or documents of his business, or stocks of goods relating to this business."

Sir, I entirely oppose this power being given to the Sales Tax Officer because I know to what extent this sales-tax is being worked unsatisfactorily not only in my constituency but fairly well in the whole district. Although the Committee has said, " It is only in extreme or exceptional circumstances that prosecution may be resorted to", but I know that nearly 50 to 60 per cent of the defaulters have been prosecuted before a First Class Magistrate in spite of the provision that the sales-tax arrears can be recovered as if they were arrears of land revenue. Actually, in most of the cases, the sales-tax officers have resorted to criminal prosecution. This particular amending section is, probably, being followed after the advice given by the Sales Tax Committee. There, they have specifically laid down that such tax evader should be firmly dealt with and I am one with them so far as this principle is concerned. But, in view of section 20 of the original Act, where was the necessity for Government to resort to the amplification of section 18 of the original Act? The experience of the general public so far as the Sales-tax Officer's dealing with honest merchants is concerned, is rather woeful. I know several instances wherein most honest merchants have been prosecuted before the First Class Magistrate and he had no option to rebut that offence. Oftentimes he has been punished. Sir, the assessment that is being made by the Sales-tax Officer is one which is a thing that cannot be questioned by the merchant, because most of us know the difficulties under which the merchant is labouring. I for one do not say that the State should not get taxes from this indirect method. But, I am not for making this law more rigorous than what it is.

Even today big merchants are put to a lot of harassment by sales-tax officers. Even if the relevant document is produced, there are several difficulties experienced by the merchants. The sales-tax officer says that it is not a genuine account, that it is not correct, that it is not the account that is to be produced, that it is not the account on which he could make his final assessment. Only dishonest merchants will go scot-free and honest merchants who produce genuine documents are hit hard. So the provision that is made in the original Act of 1948 is sufficient. If he is a dishonest merchant, there is already enough provision in the original Act itself to deal with such a troublesome merchant. For what fault of his he should be penalised? That question I pose, because he is only a collecting agent. So the amending Bill gives unasked powers to the sales-tax officers and therefore I am totally opposed to it.

Also, with regard to the several provisions under which the Government have re-classified or re-orientated their

(SRI M. LINGANNA.)

method of collecting tax, they have tried to introduce a new Schedule II and therein they have sought to take the permission of this House to amend Schedule II whenever they find it suitable. And they have also said that on the basis of notification in the *Mysore Gazette* the Schedule II to this Act shall be deemed to have been amended accordingly. I believe this is a matter which everyone of us should think over a bit. Because, indirectly we are giving to the Government delegated power of legislation and thereby to a certain extent, I believe, the legislative power of this august House is being curtailed. No doubt the Government ought to be vested with such powers; but when taxation measures are concerned, I am afraid such delegated authority to the executive is rather harmful to themselves and not merely that it would reflect on the prestige of this House and also their powers. So from this point of view I submit that the taking of the powers of delegated legislation by the Government is rather going to be a precedent and in respect of a financial proposal like this which is placed before us it should not be done. So I respectfully submit that Government may delete clause (*b*) of sub-section 2 of section 3 of the principal Act, because we are creating a bad precedent and therefore I submit that the amending Bill is rather, in regard to these two aspects, surprising.

With regard to the slab system I believe it will introduce much more confusion in the merchant class. Because, for the past six years they have been accustomed to one particular system of taxation. Now this slab system or method by which the sales-tax officer is trying to collect tax is an experiment.

Finally, in respect of Schedule II to which several articles have been added for single point tax, I want to say a few words with regard to items 23, 26 and 32. Item 23 deals with medical preparations. They have sought to levy one anna for every rupee of turnover relating to such goods. Also on *agarabattis* the rate of tax for every rupee of turnover relating to such goods is one anna. Also on groundnut three pies are levied on every rupee of turnover. So far as medical preparations are concerned, I believe the Government have not exempted the Ayurvedic and Unani medicines and also Allopathic medicines. These medical preparations I believe need exemption. Because we know what amount of money we are spending out of the total Consolidated Fund of the State for hospitals and health centres. What is the policy behind this particular venture? It is to give the best amenity not merely to the rich but also to the poor. But here if you are going to tax and collect the sales-tax on this particular item, it is not a policy which is consistent with the accepted policy of the State to promote the health of each and every citizen.

Also with regard to *agarabattis*. It comes under cottage industries. I believe *agarabattis* are not produced on a large scale in factories. Probably the Revenue Minister who is in charge of the Bill knows that in cities like Bangalore and Mysore most of the women resort to the production of *agarabattis* and it has almost become a cottage industry. What would be the effect of this particular sales-tax on *agarabattis*? It would only enhance the rate of *agarabattis* which are put in packets of 25 or 30 each. Indirectly we are not helping the poor people who are accustomed to this method of earning livelihood by such cottage industries as the production of *agarabattis*. So I submit respectfully that even item No. 26 may be exempted from being taxed.

Also with regard to groundnut. As it was said by one Hon'ble Member, if the Government are going to exempt the produce of groundnut from sales-tax, then it would be reasonable that purchase-tax be levied on groundnut. But here you are introducing a purchase-tax on groundnut and at the same time retain the sales-tax on the oil that is being extracted out of groundnut.

7 P.M.

So far as this item 32 is concerned, edible oils are exempted. Certainly I do not feel that the Government is rather

justified in levying a purchase-tax on groundnut, because groundnut that is being sold of course is mostly produced by raiyats and what will be the effect when we will have to levy a purchase-tax on groundnut?

Sri J. MOHAMED IMAM.—It will increase the cost of edible oils.

Sri M. LINGANNA.—And what will be the amount of difficulty that the raiyat will be put to at the point where he is going to sell his goods? In most of the cities they have got regulated markets and on this particular platform wherein the raiyat brings his goods for the purposes of selling, the merchant who is clever enough will so arrange that every pie that is paid as purchase-tax by him will be recovered from the raiyat while purchasing groundnut from him. So indirectly the raiyat who is the prime producer of this commodity will be hit hard. Indirectly we are enhancing the rate on edible oil that is being extracted from this groundnut. I therefore say that the levy of three pies per rupee on the total turnover is not justified, and I humbly submit that these three items may be exempted from being subjected to sales-tax.

Sir, with these few remarks, I respectfully submit that the enlargement of Section 18 and the taking away of the power from this House to legislate indirectly are not conducive to good democratic principles.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ಕಂದಾಯ ಯಾವ ರೀತಿ ಜಾಸ್ತಿಯಾಗಿ ದೇಶದ ಮೇಲೆ ಹೊರಿಸಲ್ಪಡುತ್ತಿದೆ ಎಂಬುದನ್ನು ಈಗಾಗಲೇ ಮಾನ್ಯ ಸ್ನೇಹಿತರು ಹೇಳಿದ್ದಾರೆ. ದೇಶದಲ್ಲಿ ಪ್ರತಿಯೊಬ್ಬ ಪ್ರಜೆಯೂ ಕೂಡ ಈ ಕಂದಾಯ ಏನು ಎನ್ನುವುದನ್ನು ತಿಳಿದುಕೊಳ್ಳಬೇಕಾಗಿದೆ. ನಮ್ಮ ದೇಶದಲ್ಲಿ ಅನೇಕ ತೆರಿಗೆಗಳು ಇವೆ. ತೆರಿಗೆಯನ್ನು ಕೊಡುತ್ತಾ ಇರತಕ್ಕವರು ಬೇಕಾದಷ್ಟು ಜನ ಇದ್ದಾರೆ ಮತ್ತು ಒಂದೊಂದು ಸೆಕ್ಷನ್ನಿನವರು ಒಂದೊಂದು ತೆರಿಗೆಯನ್ನು ಕೊಡುತ್ತಾ ಇದ್ದಾರೆ. ದೇಶದಲ್ಲಿರತಕ್ಕ 90 ಲಕ್ಷ ಪ್ರಜೆಗಳಲ್ಲಿ ಪ್ರತಿಯೊಬ್ಬರೂ ಕೂಡ ಈ ತೆರಿಗೆಯನ್ನು ಜೆಸಿಯಾ ಕಂದಾಯದಂತೆ ಕೊಟ್ಟೇಕೊಡಬೇಕು. ಮೊದಲು ಇದನ್ನು ಏತಕ್ಕೆ ಹಾಕಿದರು ಎಂಬುದನ್ನು ಹೇಳಬೇಕಾದರೆ, ಪಾನನಿರೋಧವನ್ನು ಜಾರಿಗೆ ತಂದುದಕ್ಕೋಸ್ಕರ ಹಾಕಿದ್ದೇವೆ ಎಂದು ಹೇಳಿದ್ದಾರೆ. ನಿಜ, ದೇಶಕ್ಕೆ ಸ್ವಾತಂತ್ರ್ಯ ಬಂದು ಕಾಂಗ್ರೆಸ್ ಪಕ್ಷ ಅಧಿಕಾರ ತೆಗೆದುಕೊಂಡುದರ ಜ್ಞಾಪಕಾರ್ಥವಾಗಿ ಈ ತೆರಿಗೆ ಸಾರ್ವೋದ್ಧಾರವಾಗಿ ಇದೆ ಎಂದು ನಾನು ಭಾವಿಸುತ್ತೇನೆ. ಆಮೇಲೆ ಆಗಿನಿಂದ ಒಂದೇ ಸಮ ಚಳವಳಿ ನಡೆಯುತ್ತಾ ಇದೆ. ಈ ಕಂದಾಯ ಪ್ರತಿಯೊಬ್ಬರಿಗೂ ತೊಂದರೆಕೊಡುತ್ತಾ ಇದೆ. ತಿಳಿವಳಿಕೆ ಇಲ್ಲದ ವರ್ತಕರು ಲೆಕ್ಕಾಚಾರ ಬರೆಯುವುದಕ್ಕೆ ಬಾರದೆ, ಅನೇಕ ವೇಳೆ ಸಿಕ್ಕಾಪಟ್ಟೆ ಅವರ ಮೇಲೆ ತೆರಿಗೆ ಹೊರಿಸಿ, ಅನೇಕರನ್ನು ತೆರಿಗೆ ಕೊಡಲಿಲ್ಲ ಎಂದು ಹೇಳಿ, ಜೈಲಿಗೆ ಕಳುಹಿಸಿದ್ದಾರೆ. ಈ ರೀತಿ ಆರ್ಬಿಟ್ರೆರಿಯಾಗಿ ಹಾಕಿ ನಿಜವಾಗಿಯೂ ಅವನು ಕೊಡಬೇಕೇ ಕೊಡಬೇಕಾಗಿಲ್ಲವೇ ಎಂಬ ವಿಚಾರವನ್ನು ಪರಿಶೀಲನೆಮಾಡದೆ ಜೈಲಿಗೆ ಹಾಕಿದ ಉದಾಹರಣೆಗಳು ಅನೇಕವಾಗಿ ಇವೆ. ಕಂದಾಯವನ್ನು ವಸೂಲು ಮಾಡಬೇಕಾದರೆ ಸರ್ಕಾರದವರಿಗೆ ಬೇಕಾದಷ್ಟು ಮಾರ್ಗಗಳಿವೆ. ಲ್ಯಾಂಡ್ ರೆವೆನ್ಯೂ ಅರಿಯರ್ಸ್‌ನಂತೆ ವಸೂಲು ಮಾಡತಕ್ಕ ಅಧಿಕಾರ ಇದೆ. ಆ ಅಧಿಕಾರವನ್ನು ಚಲಾಯಿಸಿ ಅವರ ಸ್ವತ್ತು ವಿಲೆಯಿಂದ ಕಂದಾಯ ವಸೂಲು ಮಾಡಬಹುದು. ಹಾಗಿದ್ದರೂ ತಪ್ಪಿತಸ್ತರಂತೆ ಜೈಲಿಗೆ ಹಾಕೋಣದರಿಂದ ಅನೇಕ ವೇಳೆ ಮರ್ಯಾದಸ್ತರಾಗಿ, ಮಾನವಾಗಿ ಬಾಳುವವರಿಗೆ ತೊಂದರೆಯಾಗಿದೆ. ಆದ್ದರಿಂದ ಇಂಥ ಒಂದು ಕಂದಾಯವನ್ನು ತೀವ್ರವಾಗಿ ವಿರೋಧಿಸಬೇಕಾದದ್ದು ನಮ್ಮ ಕರ್ತವ್ಯ ಎಂದು ನಂಬಿದ್ದೇನೆ.

ಈ ತೆರಿಗೆಯಿಂದ ನಿಜವಾಗಿಯೂ ಕಷ್ಟ ಇದೆ ಎಂಬುದು ಸರ್ಕಾರದವರಿಗೇ ಅರಿವಾಗಿ ಅವರು ಒಂದು ಸಮಿತಿಯನ್ನು ನೇಮಕಮಾಡಿದರು. ಸಮಿತಿಯಲ್ಲಿ 9 ಜನ ಸದಸ್ಯರಿದ್ದಾರೆ. ಅದಕ್ಕೆ ಮಾನ್ಯ ಮಂತ್ರಿಗಳೇ ಅಧ್ಯಕ್ಷರು. ಸರ್ಕಾರದ ಪಕ್ಷದ ಸದಸ್ಯರೇ 6 ಜನ ಮತ್ತು ಇತರರು 3 ಜನ. ಹೀಗಿರುವಾಗ ಆ ಸಮಿತಿಯ ಮೇಲೆ ಅವರು ಎಷ್ಟುಮಟ್ಟಿನ ಪ್ರಭಾವ ಬೀರಲಿಕ್ಕೆ ಅವಕಾಶವಿತ್ತು ಎಂಬುದನ್ನು ಯೋಚನೆ ಮಾಡಬಹುದು. 9 ಜನ ಸದಸ್ಯರಲ್ಲಿ 6 ಜನ ಅವರು 3 ಜನ ಇತರರು ಏನು ಮಾಡಬಹುದು! ಅದರಲ್ಲಿ ಒಬ್ಬರು ಡಿಸೆಂಟಿಂಗ್ ನೋಟ್ ಕೊಟ್ಟಿದ್ದಾರೆ. ಅದಕ್ಕೂ ಮಾನ್ಯತೆ ಕೊಡದಿದ್ದರೆ ಕೇಳಿ ತಾನೆ ಏನು ಪ್ರಯೋಜನ?

ಶ್ರೀ ಟಿ. ಮರಿಯಪ್ಪ (ಮೈಸೂರು—ಉತ್ತರ).—ಕಾಂಗ್ರೆಸ್‌ನವರೇ Note of dissent ಕೊಟ್ಟಿದ್ದಾರೆ; ನೀವೇನೂ ಕೊಟ್ಟಿಲ್ಲವಲ್ಲ!

ಶ್ರೀ ಬಿ. ಹುಚ್ಚೇಗೌಡ.—ಯಾರೇ ಕೊಡಲಿ. ಆ ಸಮಿತಿಯ ಅಭಿಪ್ರಾಯಕ್ಕೆ ಏನಾದರೂ ಇದರಲ್ಲಿ ಮನ್ನಣೆ ದೊರೆತಿದೆಯೋ ಎಂಬುದನ್ನು ನೋಡಿ! ಇದನ್ನು ಈಗಾಗಲೇ ನಮ್ಮ ಸ್ನೇಹಿತರೆಲ್ಲಾ ಹೇಳಿದ್ದಾರೆ. ಮದರಾಸಿನ ಮುಖ್ಯಮಂತ್ರಿ ರಾಜಗೋಪಾಲಚಾರಿಯವರು ಈ ಸೇಲ್ಸ್‌ಟ್ಯಾಕ್ಸ್ ವಿಚಾರದಲ್ಲಿ ಹೇಳಿದ್ದ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮೊನ್ನೆ ಅವರು ಒಂದು ಸ್ಟೇಟ್‌ಮೆಂಟ್ ಕೊಟ್ಟರು. ಸೇಲ್ಸ್‌ಟ್ಯಾಕ್ಸ್ ಪಾನನಿರೋಧ ಜಾರಿಗೆ ತಂದಿದ್ದಕ್ಕೋಸ್ಕರವೇ ಹಾಕಿದ್ದು. ಕಾಂಗ್ರೆಸ್ ಸರ್ಕಾರ ಹೋಗಿ ಅಡ್ವೈಜರ್ ರೆಜೀಂ ಬಂದಿದ್ದಾಗ ಪಾನನಿರೋಧವನ್ನು ರದ್ದುಮಾಡಿದರು. ಪುನಃ ಕುಡಿತವನ್ನು ಜಾರಿಗೆ ತಂದರು. ಹಾಗೆ ಕುಡಿತವನ್ನು ಜಾರಿಗೆ ತಂದೂ ಕೂಡ ಸೇಲ್ಸ್‌ಟ್ಯಾಕ್ಸನ್ನು ವಸೂಲು ಮಾಡುತ್ತಾ ಇದ್ದರು. ಆಗ ಶ್ರೀ ರಾಜಗೋಪಾಲಾಚಾರಿಯವರು ಆಗಿನ ಗೌವರ್ನರಿಗೆ ಕಾಗದ ಬರೆದು "ನಾವು ಸೇಲ್ಸ್‌ಟ್ಯಾಕ್ಸ್ ಜಾರಿಗೆ ತಂದದ್ದು ಪ್ರೊಹಿಬಿಷನ್‌ಗೋಸ್ಕರ; ಪ್ರೊಹಿಬಿಷನ್ ಇಲ್ಲದೆ ಇದ್ದಮೇಲೆ ಸೇಲ್ಸ್‌ಟ್ಯಾಕ್ಸಿನಿಂದ ಒಂದು ಕಾಸು ತೆಗೆದುಕೊಳ್ಳುವುದಕ್ಕೂ ಕೂಡ ನಿಮಗೆ ಅಧಿಕಾರವಿಲ್ಲ, ಆ ರೀತಿ ವಸೂಲು ಮಾಡಕೂಡದು; ಅದಕ್ಕೆ ತೀವ್ರ ಪ್ರತಿಭಟನೆ ಮಾಡುತ್ತೇನೆ" ಎಂದು ಹೇಳಿ ತಿಳಿಸಿದರು.

(ಶ್ರೀ ಬಿ. ಹುಚ್ಚೇಗೌಡ)
ಆಗಿನ ಗವರ್ನರ್‌ರವರು ಜವಾಬು ಬರೆದಿರುವುದು, "ನಿಮ್ಮ ಅಡ್ವೈಜರ್ ರೆಜೀಂ ಮುಗಿದಮೇಲೆ ನೀವು ಪುನಃ ಬರುತ್ತೀರಿ. ಆದ್ದರಿಂದ ಪಾನನಿರೋಧದಲ್ಲಿ ಬರುವ ಹಣವನ್ನು ಕೂಡ ಹಾಗೆಯೇ ಮುಡುಪಾಗಿಟ್ಟಿರುತ್ತೇವೆ, ನೀವು ಬಂದಮೇಲೆ ಖರ್ಚುಮಾಡಿಕೊಳ್ಳಬಹುದು" ಎಂದು ಬರೆದಿದ್ದಾರೆ. ಪಾನನಿರೋಧ ತೆಗೆದುದರಿಂದ, ತಿರುಗಿ ಕುಡಿತವನ್ನು ಜಾರಿಗೆ ತಂದುದರಿಂದ ಬರುವ ಉತ್ಪತ್ತಿಯನ್ನು ರಿಸರ್ವಿನಲ್ಲಿಡುತ್ತೇವೆ, ಆ ಹಣವನ್ನು ನೀತಿ ಬಿಟ್ಟು ಖರ್ಚುಮಾಡುವುದಿಲ್ಲ ಎಂದು ಕಾಗದ ಬರೆದಿದ್ದರೆಂದು ಮೊನ್ನೆ ಹೇಳಿದ್ದಾರೆ. ಪಾನ ನಿರೋಧ ಜಾರಿಗೆ ತಂದರೂ ಬಂದ ಉತ್ಪತ್ತಿ ತಿಂದಿಲ್ಲವೆಂದು ಶ್ರೀಮಾನ್ ರಾಜಗೋಪಾಲಚಾರಿಯವರು ಹೇಳಿದ್ದಾರೆ. ಆದೇ ನಮ್ಮ ಸರ್ಕಾರ ಏನು ಮಾಡುತ್ತಿದೆ? ಇತ್ತಕಡೆ ಪಾನ ನಿರೋಧ ಅರ್ಧಕ್ಷೌರ, ಅತ್ತಕಡೆ ಕುಡಿತದಿಂದ ಬರುತ್ತಿದ್ದ ಹಣ ಬರುತ್ತಲೇ ಇದೆ. ಇದರ ಜೊತೆಗೆ 1¼ ಕೋಟಿ ರೂಪಾಯಿಗಳ ಸೇಲ್ಸ್ ಟ್ಯಾಕ್ಸ್ ಸಹ ಬರುತ್ತಿದೆ. ಈ ರೀತಿಯಾಗಿ ಯಾವ ತತ್ವದೃಷ್ಟಿಯಿಂದ ಮಾಡಿದ್ದಾರೆಂಬುದನ್ನು ನಮ್ಮ ಮಾನ್ಯ ಸಭೆಯವರು ಸ್ವಲ್ಪಮಟ್ಟಿಗೆ ವಿವೇಚನೆಮಾಡಿ ನೋಡಬೇಕು. ಈ ಹಣ ಏತಕ್ಕಾಗಿ ವಿನಿಯೋಗವಾಗುತ್ತಿದೆ, ಈ ಸರ್ಕಾರ ಯಾವ ರೀತಿಯಲ್ಲಿ ಖರ್ಚು ಮಾಡುತ್ತಿದೆ ಎಂಬುದನ್ನು ನೋಡಬಹುದು. ಸರ್ಕಾರದವರು ಹೊಸದಾಗಿ ತೆರಿಗೆ ಹಾಕಿ ಅಥವಾ ಹೆಚ್ಚಿಸಿ ಯಾವ ರೀತಿಯಲ್ಲಿ ಖರ್ಚು ಮಾಡುತ್ತಾರೆ ಎಂಬುದನ್ನು ಶ್ರೀಮಾನ್ ವೀರಣ್ಣಗೌಡರು ಮೊನ್ನೆ ಹೇಳಿದ್ದಾರೆ. ನಿಜವಾಗಿಯೂ ದೇಶದಲ್ಲಿರುವ ಜನರ ಜೀವನ ಸುಖಮಯವಾಗಲು, ಅವರಿಗೆ ಸಾಮಾನ್ಯವಾಗಿ ಬೇಕಾದಷ್ಟು ಸೌಕರ್ಯ ನೀಡಲು, ದೇಶದಲ್ಲಿರುವ ಅಜ್ಞಾನವನ್ನು ನಿವಾರಣೆಮಾಡಲು ಈ ಹಣವನ್ನು ಖರ್ಚುಮಾಡಲು ಮೊದಲು ಗಮನ ಕೊಡ ಬೇಕಾದ್ದು ಆವಶ್ಯಕ.

Sri A. BHEEMAPPA NAIK (Molakalmuru).—Is this a speech on this Bill or is it a Budget speech, Sir? I want to know how this is relevant as to how the money is spent.

Sri B. HUTCHE GOWDA.—I have every right, Sir.

Mr. SPEAKER.—Of course, but this is not the occasion. You had an occasion when you spoke on the Budget and you have said all this.

ಶ್ರೀ ಬಿ. ಹುಚ್ಚೇಗೌಡ.—ಸೇಲ್ಸ್ ಟ್ಯಾಕ್ಸ್ ಇಲಾಖೆಗೆ ಹೋದವರ್ಷ 4 ಲಕ್ಷ ಚಿಲ್ಲರೆ ರೂಪಾಯಿಗಳ ಖರ್ಚಿತ್ತು, ಈ ವರ್ಷ ಬಡ್ಜೆಟ್ಟಿನಲ್ಲಿ 9 ಲಕ್ಷ ಚಿಲ್ಲರೆ ರೂಪಾಯಿಗಳನ್ನೊದಗಿಸಿದೆ.

Sri Kadidal MANJAPPA.—The expenditure on establishment for Sales Tax for the year 1953-54 is Rs. 5,53,000 revised estimate. For this year it is six lakhs and odd and this is due to the merger of Bellary. He is including the Entertainment Tax also.

ಶ್ರೀ ಬಿ. ಹುಚ್ಚೇಗೌಡ.—ಅಕೌಂಟ್ಸ್ ಪ್ರಕಾರ 1952-53ಕ್ಕೆ 4 ಲಕ್ಷ 34 ಸಾವಿರ ರೂಪಾಯಿಗಳನ್ನೂ ಈ ವರ್ಷ 9 ಲಕ್ಷ 15 ಸಾವಿರ ರೂಪಾಯಿಗಳನ್ನೂ ಬಡ್ಜೆಟ್ಟಿನಲ್ಲಿ ಒದಗಿಸಿದ್ದಾರೆ. ಈ ವರ್ಷ ಹೋದವರ್ಷ ವಿದ್ದುದರ ಎರಡರಷ್ಟಾಗಿರುವುದು ದೇಶದ ಜನತೆಯ ಮೇಲೆ ಎಷ್ಟು ಕಠಿಣತರವಾಗಿ ಪರಿಣಮಿಸುವುದೆಂಬುದನ್ನು ಗಮನಿಸಬೇಕು. ಈ ಕಾನೂನನ್ನು ಜಾರಿಗೆ ತರಲು ಎಷ್ಟು ಸಿಬ್ಬಂದಿ ಹೆಚ್ಚಿಸಿದೆಯೆಂಬುದನ್ನು ಇದರಿಂದ ಊಹಿಸಬಹುದು. ಜನರಿಗೆ ಮುಂದೆ ಈ ತೆರಿಗೆಯಿಂದ ಎಷ್ಟು ತೊಂದರೆಯಿದೆ ಎಂಬುದನ್ನು ಇದೊಂದು ಬಾಬಿನಿಂದಲೇ ನೋಡಬಹುದು. ಬಡವರಿಗೆ ಮನೆ ಕಟ್ಟಿಕೊಳ್ಳಲು ಹಣ ಕೊಡಿ ಎಂದು ಕೇಳಿದರೆ ಇಲ್ಲವೆಂದು ಹೇಳುತ್ತಾರೆ.

Mr. SPEAKER.—Dealing with the expenditure is a different aspect of the problem altogether. We are dealing with Sales Tax; you can point out the defects and the remedy.

Sri B. HUTCHE GOWDA.—I am opposing the Bill itself and say the Bill is not necessary at all.

Mr. SPEAKER.—But the original Act is there.

Sri B. HUTCHE GOWDA.—We will look after it later; first let them withdraw this Bill.

ಹಿಂದೆ ವರಮಾನ ತೆರಿಗೆ, ಸೇಲ್ಸ್‌ಟ್ಯಾಕ್ಸ್ ಇದನ್ನೆಲ್ಲಾ ಅಸಿಸ್ಟೆಂಟ್ ಕಮಿಷನರೇ ನೋಡಿಕೊಳ್ಳುತ್ತಿದ್ದರು. ಈಗ ವರಮಾನ ತೆರಿಗೆ ಇಲಾಖೆಯು ನಮ್ಮ ಕೈಬಿಟ್ಟ ಮೇಲೆ ಇದಕ್ಕೇಕೆ ಇಷ್ಟು ಖರ್ಚು ಎಂದು ಕೇಳಬೇಕಾಗಿದೆ. ಬಳ್ಳಾರಿಗೆ 2 ಲಕ್ಷ, ಬಾಕಿ ಸಂಸ್ಥಾನಾವಾಳಿ 4 ಲಕ್ಷ ಕೊಟ್ಟಿರುವುದು ಬಹಳ ಹೆಚ್ಚು. ಸರ್ಕಾರದವರು ತೆರಿಗೆಯನ್ನು ಹಾಕುವುದಕ್ಕೆ ಮುಂಚೆ ಆದಷ್ಟು ಖರ್ಚನ್ನು ಖೋತಾಮಾಡಿ ಬುದ್ಧಿವಂತಿಕೆಯಿಂದ ಖರ್ಚು ಮಾಡಿಕೊಂಡು ಬರಬೇಕು. ಇಲ್ಲದಿದ್ದರೆ ನಾವು ಇದಕ್ಕೆ ಬೆಂಬಲ ಕೊಡುವುದಕ್ಕಾಗುವುದಿಲ್ಲ. ಈ ತೆರಿಗೆ ಹೆಚ್ಚಿಸುವುದು ಸರಿಯಲ್ಲ. ಈ ಬಿಲ್ಲನ್ನು ವಾಪಸು ತೆಗೆದುಕೊಂಡು ಈಗ ಸಾಮಾನ್ಯವಾಗಿರತಕ್ಕ ಅನಾವಶ್ಯಕವಾದ ಖರ್ಚನ್ನೆಲ್ಲಾ ತೆಗೆದುಹಾಕಬೇಕು. ಮೊನ್ನೆ ಗೃಹಸಚಿವರು ಪೋಲೀಸು ಇಲಾಖೆಯ ವಿಚಾರದಲ್ಲಿ ಮಾತನಾಡುತ್ತಾ ಅಲ್ಲಿನ ನೌಕರರಿಗೆ ಸಂಬಳ ಹೆಚ್ಚಿಸಬೇಕಾದರೆ ಸುಮಾರು 1,300 ಜನರನ್ನು ತೆಗೆಯಬೇಕಾಗುವುದೆಂದು ಹೇಳಿದರು. ಅದಕ್ಕೆ ಮೊದಲು ದೊಡ್ಡ ಆಫೀಸರುಗಳನ್ನು ತೆಗೆಯಬೇಕು. ಚಿಕ್ಕವರನ್ನು ತೆಗೆಯುವುದು ಸುಲಭ, ದೊಡ್ಡವರನ್ನು ತೆಗೆಯುವುದು ಕಷ್ಟ ಎಂದು ಹೇಳುವುದು ಸರಿಯಲ್ಲ. ಒಂದು ಉದಾಹರಣೆ ಹೇಳುವುದಾದರೆ ಮೊನ್ನೆ ದೊಡ್ಡ ದೊಡ್ಡ ಅಧಿಕಾರಿಗಳಿಗೆ ಬಂಗಲೆ ಕಟ್ಟಿಕೊಳ್ಳಲು 12½ ಸಾವಿರ ರೂಪಾಯಿ ಇದ್ದದ್ದನ್ನು, 25 ಸಾವಿರ ರೂಪಾಯಿಗೆ ಹೆಚ್ಚಿಸಿ ಕೊಟ್ಟಿದ್ದಾರೆ.

ಇಂಡಿಯಾ ಸರ್ಕಾರದವರೂ ಕೂಡ ಅನೇಕ ಪದಾರ್ಥಗಳ ಮೇಲೆ ಸೇಲ್ಸ್ ಟ್ಯಾಕ್ಸ್ ಹಾಕಕೂಡದೆಂದು ಹೇಳಿದ್ದರೂ ಅವನ್ನೆಲ್ಲಾ ತೆರಿಗೆ ಕೊಡಬೇಕೆಂಬ ಪಟ್ಟಿಯಲ್ಲಿ ಸೇರಿಸಿದ್ದೀರಿ. ಉದಾಹರಣೆಗೆ ನೆಲಗಡಲೆಗೂ ತೆರಿಗೆ ಕೊಡಬೇಕು.

> "First purchase in the State of Mysore by the first or any subsequent dealer having a place of business in the State of Mysore and who is not exempt from taxation

under section 3 (3), irrespective of the fact whether the seller is a grower or not.''

ಈಗ ನಮ್ಮ ದೇಶಕ್ಕೆ ಮುಖ್ಯವಾಗಿ ನೆಲಗಡಲೆ ಕಾಯಿ ಅತ್ಯವಶ್ಯಕ. ಅದರ ಹಿಂಡಿಯನ್ನು ದನಗಳ ಮೇವಿಗೆ ಯಥೇಚ್ಛವಾಗಿ ಉಪಯೋಗಿಸುತ್ತಾರೆ. ಈಗಾಗಲೇ ಇದರ ಬೆಲೆ ವಿಪರೀತವಾಗಿದೆ. ಈಗ ತಾವು ಈ ತೆರಿಗೆಯನ್ನು ಬೇರೆ ವಿಧಿಸಿದರೆ ಇದರ ಬೆಲೆಯು ಮತ್ತಷ್ಟು ಏರುತ್ತದೆ. ತೆರಿಗೆ ಹಾಕುವ ವಿಚಾರದಲ್ಲಿ ಈ ರೀತಿ ವಿತರಣೆಯಿಲ್ಲದೆ ಹಾಕುತ್ತಿರುವುದು, ಅದರಲ್ಲಿಯೂ ನಿತ್ಯ ಬಳಕೆಗೆ ಉಪಯೋಗಿಸುತ್ತಿರುವ ಪದಾರ್ಥಗಳ ಮೇಲೆ ತೆರಿಗೆ ಹಾಕುವುದು ಬಹಳ ತಪ್ಪು. ಈಗತಾನೇ ಮಾತನಾಡಿದ ಶ್ರೀಮಾನ್ ಡಿ. ದೇವರಾಜ ಅರಸಿನವರು 7½ ಸಾವಿರ ವರಮಾನದ ಮೇಲೆ 25 ರೂಪಾಯಿ ಎಂದು ತೆರಿಗೆ ವಿಧಾಯಕ ಮಾಡಿರುವುದು ಹೆಚ್ಚೇನೂ ಅಲ್ಲವೆಂದು ಹೇಳಿದರು. ಆದರೆ ಆತನು ಲೆಕ್ಕ ಪತ್ರಗಳನ್ನು ಸರಿಯಾಗಿಟ್ಟು ತನ್ನ ವರಮಾನ 7½ ಸಾವಿರ ರೂಪಾಯಿ ಮತ್ತು ಅದಕ್ಕಿಂತ ಹೆಚ್ಚು ಎಂಬುದನ್ನು ತೋರಿಸಬೇಕಾದರೆ ಸುಮಾರು 250 ರೂಪಾಯಿಗಳಷ್ಟು ಖರ್ಚು ಮಾಡಿಕೊಂಡು ಲೆಕ್ಕ ಇಡಬೇಕು.

ಶ್ರೀ ಟಿ. ಮರಿಯಪ್ಪ.—ಲೆಕ್ಕ ಇಡಬೇಕಾಗಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಇಡದೇ ಇದ್ದರೆ ಅವನ ಮೇಲೆ ಈ ತೆರಿಗೆಯ ಹೊರೆ ವಿಪರೀತವಾಗಿ ಬಿದ್ದು ಹೋಗುವ ಸಂಭವವಿದೆ. ಈ ವಿಚಾರದಲ್ಲಿ terms of reference of the Committee ಏನು ಎಂಬುದನ್ನು ನೋಡಬೇಕು. ಈಗಿರುವ ತೆರಿಗೆಯ ಹೊರೆಯ ಭಾರವನ್ನು ಸಾಧ್ಯವಾದಮಟ್ಟಿಗೂ ಇಳಿಸುವ ಉದ್ದೇಶದಿಂದ ಈ ಸೇಲ್ಸ್ ಟ್ಯಾಕ್ಸ್ ಸಮಿತಿಯನ್ನು ನೇಮಕ ಮಾಡಿತ್ತು ಎಂದು ನಾನು ತಿಳಿದುಕೊಂಡಿದ್ದೇನೆ. ಹೀಗಿರುವಲ್ಲಿ ಈ ಸಮಿತಿಯವರು turnover ಪರಿಮಿತಿಯನ್ನು 10 ಸಾವಿರದಿಂದ 7½ ಸಾವಿರ ರೂಪಾಯಿಗಳಿಗೆ ಇಳಿಸಲು ಸಲಹೆಮಾಡಿದ್ದರೆ ಇದಕ್ಕೆ ಸಮಿತಿ ಬೇಕಾಗಿತ್ತೆ ಎಂದೆನ್ನಿಸುತ್ತದೆ !

ಒಟ್ಟಿನಲ್ಲಿ ಈ ಸೇಲ್ಸ್ ಟ್ಯಾಕ್ಸನ್ನು ಸರ್ಕಾರ ಹಾಕುವುದು ಖಂಡಿತವಾಗಿಯೂ ಸಾರ್ವಜನಿಕ ಹಿತದೃಷ್ಟಿಯಿಂದ ಸರಿಯಾದುದಲ್ಲ. ಸರ್ಕಾರದವರ ಗುರಿ, ಉದ್ದೇಶ ಯಾವಾಗಲೂ ಸಾಮಾನ್ಯ ಜನತೆಯ ಕಷ್ಟ ನಿವಾರಣೆ, ಅವರಿಗೆ ಅರ್ಥ ತೆರಿಗೆಯ ಭಾರ ಬೀಳದಿರುವುದು. ಅವರಿಗೆ ಸುಖ ಶಾಂತಿಯನ್ನು ಒದಗಿಸಿಕೊಡುವುದು. ಅವರ ಏಳಿಗೆಯೇ ದೇಶದ ಏಳಿಗೆ ಎಂಬ ಧ್ಯೇಯದಿಂದ ತಮ್ಮ ಆಡಳಿತ ನಿರ್ವಹಣೆಯಲ್ಲಿ ತೊಡಗಬೇಕು. ಇಷ್ಟು ಹೇಳಿ, ಸರ್ಕಾರದವರು ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಿ, ಇದನ್ನು ಜಾರಿಗೆ ತರುವುದನ್ನು ತೀವ್ರವಾಗಿ ವಿರೋಧಿಸುತ್ತೇನೆ.

*ಶ್ರೀ ಎ. ಭೀಮಪ್ಪ ನಾಯಕ್.—ಸ್ವಾಮಿ, ಎದುರು ಪಕ್ಷದ ನಾಯಕರಾದ ಶ್ರೀ ಜೆ. ಮಹಮ್ಮದ್ ಇಮಾಂರವರು ಈ ತಿದ್ದುಪಡಿ ಮಸೂದೆಯ ವಿಚಾರವಾಗಿ ತೀವ್ರವಾಗಿ ಪ್ರತಿಭಟಿಸಿ ಮಾತನಾಡಿದರು. ಅವರಿಗೆ ನಾನು ಈ ಸಂದರ್ಭದಲ್ಲಿ ಒಂದು ಪ್ರಶ್ನೆ ಹಾಕುತ್ತೇನೆ. ಇದುವರೆಗೂ ಜಾರಿಯಲ್ಲಿರುವ ಆಕ್ಟಿನಿಂದ ಜನರಿಗೆ ತೊಂದರೆಯಾಗುತ್ತಿದೆಯೆಂದು ಕಂಡುಬಂದು, ಅದನ್ನು ನಿವಾರಿಸಲು Sales- Tax Committee ಒಂದನ್ನು ಮಾಡಿ, ಈಗ ಈ ತಿದ್ದುಪಡಿ ಮಸೂದೆಯನ್ನು ಸರ್ಕಾರದವರು ತಂದಿರುತ್ತಾರೆ. ಇದು ಬೇಡವಾದರೆ ಹೋಗಲಿ, ಅವರು ಹಿಂದೆ ಇದ್ದ ಆಕ್ಟನ್ನೇ ಒಪ್ಪಿಕೊಳ್ಳಲು ಸಿದ್ಧವಾಗಿದ್ದಾರೆಯೇ ? ಹಾಗಿದ್ದ ಪಕ್ಷದಲ್ಲಿ ನಾವೆಲ್ಲರೂ ಸಹಕರಿಸಿ ಇಂದು ಈ ತಿದ್ದುಪಡಿ ಮಸೂದೆಯನ್ನು ವಾಪಸು ತೆಗೆದುಕೊಳ್ಳಿ ಎಂದು ಸಲಹೆ ಮಾಡೋಣ. ಈ ವಿಚಾರದಲ್ಲಿ ಅವರು ಜವಾಬ್ದಾರಿ ತೆಗೆದುಕೊಂಡು ಹೇಳಲಿ. ಹಾಗಿಲ್ಲದಿದ್ದರೆ ಈಗ ತಂದಿರುವ ತಿದ್ದುಪಡಿ ಮಸೂದೆಯನ್ನು ತೀವ್ರವಾಗಿ ವಿರೋಧಿಸುವ ಬದಲು ಇದರಲ್ಲಿರುವ ನ್ಯೂನಾತಿರಿಕ್ತಗಳನ್ನು ತೋರಿಸಲಿ, ಅದು ಸರ್ಕಾರಕ್ಕೆ ಸಮಂಜಸವೆಂದು ಕಂಡು ಬಂದರೆ, ನಮಗೂ ಕಂಡು ಬಂದರೆ, ಅವುಗಳನ್ನು ಸರಿಪಡಿಸಿಕೊಳ್ಳಲು ಪ್ರಯತ್ನ ಮಾಡೋಣ.

ಶ್ರೀ ಎಂ. ಲಿಂಗಣ್ಣನವರು ಈ ತಿದ್ದುಪಡಿ ಮಸೂದೆಯಲ್ಲಿರುವ 18ನೆಯ ಸೆಕ್ಷನ್ ಪ್ರಕಾರ Sales Tax Officer ಮನೆ ಮನೆಗೆ ಹೋಗಿ ಲೆಖ್ಖ ತನಿಖೆ ಮಾಡುವ ಅಧಿಕಾರ ಹೊಂದುತ್ತಾರೆಂಬ ಭೀತಿಯನ್ನು ವ್ಯಕ್ತಪಡಿಸಿದರು. ಅದರಲ್ಲೇನೂ ತಪ್ಪಿಲ್ಲ. ಒಂದು ವರ್ಷದ ಲೆಖ್ಖ ಎಂದರೆ 25 ಪುಸ್ತಕಗಳಿದ್ದರೆ ಅವುಗಳನ್ನು ತನಿಖೆ ಮಾಡುವುದರಲ್ಲಿ ಆ ಅಧಿಕಾರಿಗೆ ಬಹಳ ತೊಂದರೆಗಳಿರುತ್ತವೆ. ಈ ತೊಂದರೆಗಳನ್ನೆಲ್ಲಾ ಸಮಿತಿಯವರು ಕೂಲಂಕಷವಾಗಿ ವಿಮರ್ಶೆ ಮಾಡಿರುತ್ತಾರೆ.

Sri M. LINGANNA.—Is it the intention of my friend that because the documents are to be examined for 15 days, all powers of seizure also are to be given ?

Sri A. BHEEMAPPA NAIK.—I will answer that point.

ಇದರ ಮುಖ್ಯ ಉದ್ದೇಶವೇನೆಂದರೆ, ಆ ಲೆಕ್ಕಗಳನ್ನು ಅಧಿಕಾರಿ inspection ಮಾಡಿ ಅವಕ್ಕೆ ಸಂಬಂಧಿಸಿದ ರಿಕಾರ್ಡುಗಳನ್ನು ಅವನ ಕೈಲೇ ಬಿಟ್ಟು ಬರುವುದಲ್ಲ. ಯಾವ ಯಾವ documents ಇವೆಯೋ ಅವುಗಳನ್ನು ಮ್ಯಾಜಿಸ್ಟ್ರೇಟರ ಮುಂದೆಯೂ, ಟ್ರಿಬ್ಯುನಲ್ ಮುಂದೆಯೂ ಅಪೀಲು ಅಧಿಕಾರಿಯ ಮುಂದೆಯೂ produce ಮಾಡಬೇಕಾಗಿ ಬಂದರೆ ಅಂಥ ಸಂದರ್ಭದಲ್ಲಿ ಅವು ಈತನ ವಶದಲ್ಲಿದ್ದೇತೀರಬೇಕಾಗುತ್ತದೆ.

Sri M. LINGANNA.—Should he not summon those documents ?

Sri A. BHEEMAPPA NAIK.—Suppose he does not bring the documents ? It is only in such cases the power of seizure is to be exercised. ಈ ಅಂಶವನ್ನು ಸಮಿತಿಯವರು ಸಹ ಕೂಲಂಕಷವಾಗಿ ಪರಿಶೀಲಿಸಿಯೇ ಈ ರೀತಿ ವ್ಯವಸ್ಥೆ ಮಾಡುವುದು ಸೂಕ್ತವೆಂದು ಸಲಹೆ ಮಾಡಿರುವುದು.

Sri M. LINGANNA.—He is empowered under section 20 to prosecute.

Sri A. BHEEMAPPA NAIK.—That is also provided. Along with that, he will ask ' bring these documents '. He must give receipt for the documents that he takes.

ಲಾಯರುಗಳಿಗೆ documentary evidence ಕಡಮೆಯಾದಷ್ಟು ಒಳ್ಳೆಯದೇ. ಏಕೆಂದರೆ, documentary evidence is embarrassing.

Sri M. LINGANNA.—My friend is under the impression that I have defended in most of the cases. I have defended none.

Mr. SPEAKER.—Unless the Member yields I cannot allow you to speak.

Sri A. BHEEMAPPA NAIK.—My friend's argument amounts to this: The officer can enter and bring the documents. My argument is, if I need books I must bring them. That is all. Let him hold his opinion

ಆ ಸೆಕ್ಷನ್ನಿಗನುಸಾರವಾಗಿ ಮಾಡುವುದಕ್ಕೆ ಈ ತಿದ್ದುಪಡಿ ಅಗತ್ಯ. ಆಮೇಲೆ ಸಮಿತಿಯವರು ಕೂಲಂಕಷವಾಗಿ ಚರ್ಚೆಮಾಡಿ ವಿಷಯಗಳನ್ನೆಲ್ಲಾ ತಿಳಿದುಕೊಂಡು 25 ರೂಪಾಯಿ, 50 ರೂಪಾಯಿ ಎಂದು ಹೇಳಿ ಸರ್ಕಾರದವರಿಗೆ ಸ್ಲ್ಯಾಬ್ ಎಂಬುದಾಗಿ ಏನೇನು ಸೂಚನೆ ಮಾಡಿದ್ದಾರೋ ಅದು ಬೇರೆ ಮಾತು. ಈ ಹೊತ್ತು ನಾವು ಒಂದು ಕೊನೆಯಿಂದ ಇನ್ನೊಂದು ಕೊನೆಯವರೆಗೂ ಸಮಿತಿ ವರದಿಯನ್ನು ಪುಷ್ಟೀಕರಿಸುವವರು. ಸರ್ಕಾರದವರು ಅದನ್ನು ಏನಾದರೂ ಹೆಚ್ಚಿಸಿದರೆ ಏಕೆ ಹೆಚ್ಚಿಸಿದರು ಎಂಬುದಕ್ಕೆ ಜವಾಬು ಅವರು ಹೇಳಲಿ, ಅದು ಬೇರೆ ಮಾತು. ಆದರೆ ಒಂದು ಅಂಶ ತಿಳಿದುಕೊಳ್ಳಬೇಕು. ಹಿಂದಿನ ಕಾನೂನಿನಲ್ಲಿ ಏನಿತ್ತು ಎಂದರೆ ಬರೀ ಸೇಲ್ಸ್ ಟ್ಯಾಕ್ಸ್ ಹಾಕುವುದು ಒಂದೇ ಅಲ್ಲ, ಅದನ್ನು ವಸೂಲುಮಾಡತಕ್ಕದ್ದೂ ಕೂಡ ಇತ್ತು. ವಸೂಲುಮಾಡುವ ಕಾಲದಲ್ಲಿ ಪ್ರತಿ ದಿವಸದ ಲೆಕ್ಕ, ಅದಕ್ಕೆ ಸಂಬಂಧಪಟ್ಟ ಬಿಲ್ಲು, ಅದರಲ್ಲಿ ವಸೂಲುಮಾಡಿದಂಥ ದುಡ್ಡು ಇದೆಲ್ಲವನ್ನೂ ಕೂಲಂಕಷವಾಗಿ ಪರಿಶೀಲನೆ ಮಾಡುವುದಕ್ಕೆ ಬೇಕಾದಂಥ ಲೆಕ್ಕಗಳನ್ನು ಇಡತಕ್ಕದ್ದು ಇತ್ತು. ಈಗ turnover taxನಲ್ಲಿ ಆತ ಜನರಿಂದ ವಸೂಲು ಮಾಡತಕ್ಕದ್ದಕ್ಕೆ ಅಲ್ಲ. ತನ್ನ ಅಸಲು ಜಾತಾ ಈ ಮೊತ್ತ 25 ರೂಪಾಯಿ ಅನ್ನುವುದು 7½ ಸಾವಿರಕ್ಕೆ ಎಷ್ಟಾಗುತ್ತವೆ ಎಂಬ ಲೆಕ್ಕ ತೆಗೆದುಕೊಳ್ಳೋಣ. 7½ ಯಿಂದ 10 ಸಾವಿರ ರೂಪಾಯಿಗಳವರೆಗೂ 25 ರೂಪಾಯಿ ಎಂದು ಏನು ಮಾಡಿದ್ದೇವೆ ಈ 25 ರೂಪಾಯಿಗಳ ಪ್ರಕಾರ ಲೆಕ್ಕ ಹಾಕಿದರೆ ಒಂದು ರೂಪಾಯಿನ ಮೇಲೆ ಎಷ್ಟಾಗುತ್ತದೆ? ಅದು ಬಹಳ ಸ್ವಲ್ಪ. ಮೇಲ್ ಮಟ್ಟ 10 ಸಾವಿರ ರೂಪಾಯಿ, ಕೆಳಮಟ್ಟ 7½ ಸಾವಿರ ರೂಪಾಯಿ ಎಂದು ಗೊತ್ತುಮಾಡಿದೆ. ತಿಂಡಿ ತಿನ್ನಲಿಕ್ಕೆ ಬಂದ ಜನ 4 ಆಣೆ 8 ಆಣೆಗೆ ತೆರಿಗೆ ಕೊಡಿ ಎಂದರೆ ಯಾರು ಕೊಡುತ್ತಾರೆ? ಅನೇಕ ಸಣ್ಣಸಣ್ಣ ಪದಾರ್ಥಗಳಿಗೆ exemption ಕೊಟ್ಟಿಲ್ಲವೇ? ಅಡಿಕೆ, ವೀಳೆದೆಲೆ ವಗೈರೆ ಜನರಿಗೆ ಉಪಕಾರಿಯಾದುದು ಎಂದು ಹೇಳಿ ಹಾಕುವುದಕ್ಕೆ ಅಧಿಕಾರ ಇದ್ದರೂ ಕೂಡ ಬಿಟ್ಟಿದ್ದೇವೆ. ವೀಳೆದೆಲೆ, ಅಡಿಕೆ ಇಂಥ ಸಣ್ಣಸಣ್ಣ ವಸ್ತುಗಳಿಗೆ ಹಾಕುವುದು ಅಗತ್ಯವಿಲ್ಲ, ಪ್ರಯೋಜನವಿಲ್ಲ ಎಂದು ಹೇಳಿ ಅನೇಕ ವಸ್ತುಗಳ ಮೇಲೆ ಹಾಕುವುದು ಬೇಡ ಎಂದು ಹೇಳಿ ತಿಳಿಸಿದ್ದೇವೆ. ಇನ್ನೊಂದು ಪ್ರೊವಿಜನ್ನನ್ನು ನಾವು ಚೆನ್ನಾಗಿ ಯೋಚನೆ ಮಾಡಬೇಕು. ಸಮಿತಿ ಎಷ್ಟೋ ಸಹಾಯ ಮಾಡಿದೆ. 2½ ಸಾವಿರ ರೂಪಾಯಿ ಇಲ್ಲಿ, 5 ಸಾವಿರ ರೂಪಾಯಿ ಅಲ್ಲಿ ಹೋಗುತ್ತದೆ ಎಂದು ಹೇಳಿದ್ದಾರೆ. ಅದನ್ನು 14ನೇ ಸೆಕ್ಷನ್ (4) ನ್ನೂ ಓದಿದರೆ ಅರ್ಥವಾಗುತ್ತದೆ. ಕಮಿಟಿಯವರು ಮಾಡಿರತಕ್ಕ ಶಿಫಾರಸು ಎಷ್ಟು ಅನುಕೂಲವಾದದ್ದು ಎಂಬುದು ತಿಳಿಯುತ್ತದೆ. ಯಾವ ವಸ್ತುಗಳಿಗೆ ಸಿಂಗಲ್ ಪಾಯಿಂಟ್‌ನಲ್ಲಿ ಸೇಲ್ಸ್ ಟ್ಯಾಕ್ಸ್ ಆಗಲೇ ಕೊಡಲ್ಪಡುತ್ತಿದೆಯೋ, ಯಾವ ವಸ್ತು ಸೇಲ್ಸ್ ಟ್ಯಾಕ್ಸ್‌ನಿಂದ ಎಕ್ಸೆಂಪ್ಟ್ ಆಗಿದೆಯೋ ಅಂಥ ವಸ್ತುಗಳನ್ನು ಒಂದು ಅಂಗಡಿಯವನು ಇಟ್ಟುಕೊಂಡು ಅದರ ಜೊತೆಗೆ ಅವನು ಬಾಕಿ ಸಾಮಾನುಗಳನ್ನೂ ಇಟ್ಟುಕೊಂಡು 20 ಸಾವಿರ ರೂಪಾಯಿಗಳವರೆಗೂ ಮಾರಾಟ ಮಾಡಿದರೂ ಕೂಡ—ಅದರಲ್ಲಿ 50 ಮೂಟೆ ಸಕ್ಕರೆ, 50 ಮೂಟೆ ಅಕ್ಕಿ, 10 ಮೂಟೆ ಬೇಳೆ ಇದೆ ಎಂದು ಇಟ್ಟುಕೊಳ್ಳೋಣ—ಇವಕ್ಕೆಲ್ಲಾ ವಜಾ ಮಾಡಬೇಕೆಂದು ಇದೆ. ಯಾವ ವಸ್ತುವಿಗೆ ಹಿಂದೆ ಸೇಲ್ಸ್ ಟ್ಯಾಕ್ಸ್ ಕೊಟ್ಟಿದ್ದಾನೋ ಯಾವ ವಸ್ತು ಎಕ್ಸೆಂಪ್ಟ್ ಆಗಿದೆಯೋ ಆ ವಸ್ತುಗಳನ್ನು ಇಟ್ಟು ಮಾರಾಟ ಮಾಡಿದರೆ ವಜಾಮಾಡಬೇಕೆಂದು ಇದೆ. ಒಂದು ವೇಳೆ ಅದನ್ನು ತೆಗೆದುಕೊಂಡರೆ ಆಗ ಒಟ್ಟು turnoverನಲ್ಲಿ ಕೊಡಬೇಕಾದುದನ್ನು ಕೊಟ್ಟು ಎಷ್ಟು ಉಳಿಯುತ್ತದೆ? 2½ ಸಾವಿರ ರೂಪಾಯಿ ಕೂಡ ಉಳಿಯುವುದಿಲ್ಲ. ಅದನ್ನು ಯೋಚನೆ ಮಾಡಬೇಕು.

ಶ್ರೀ ಬಿ. ಹುಚ್ಚೇಗೌಡ.—7½ ಯಿಂದ 10 ಸಾವಿರ turnover ಆಗುವುದರಲ್ಲಿ ಯಾವುದಕ್ಕೆ ಕೊಟ್ಟಿದೆ ಯಾವುದಕ್ಕೆ ಕೊಟ್ಟಿಲ್ಲ ಎಂಬುದನ್ನು ಜಡ್ಜ್ ಮಾಡುವವರು ಯಾರು?

ಶ್ರೀ ಎ. ಭೀಮಪ್ಪನಾಯಕ್.—ಸೇಲ್ಸ್ ಟ್ಯಾಕ್ಸ್ ಆಫೀಸರು ಕೊಟ್ಟಿರುವುದಕ್ಕೆ ರಶೀತಿ ಇರುತ್ತದೆ. ಹಾಗಿಲ್ಲದೇ ಇದ್ದರೆ ನಾವು ಯಾವುದನ್ನೂ ಮಾಡುವುದು ಬೇಡ ಕಂದಾಯ ಕೊಡುವುದೇ ಬೇಡ ಎಂದರೇನು? ಏನಾದರೂ ಒಂದು ಅರ್ಥ ಬೇಕೋ, ಬೇಡವೋ? ಯಾವ ಯಾವ ಸಾಮಾನಿಗೆ ಸೇಲ್ಸ್ ಟ್ಯಾಕ್ಸ್ ಕೊಟ್ಟಿದೆ ಎಂದು ಕೇಳಿದರೆ ಹೇಳುವುದಕ್ಕೆ ಬಾರದೇ ಇದ್ದರೆ ಕೊಟ್ಟಿಲ್ಲ ಎಂದಾಯಿತು. ಯಾವ ವಸ್ತು ಮಾರಾಟ ಮಾಡಿದ್ದಾನೋ ಅದಕ್ಕೆ ಖಟಂವಾರು ಲೆಕ್ಕ ಇಟ್ಟಿರುತ್ತಾನೆ.

Sri M. LINGANNA.—On a point of order, Sir. The Hon'ble Member is offering his remarks on the report made by the Committee on Sales Tax. That is out of order, and he has to confine himself to the several provisions of the amending Bill and not to the report of the Sales Tax Committee.

Sri A. BHEEMAPPA NAIK.—The difference will be 50 rupees. ಅದು ಹೆಚ್ಚು ಎಂದು ಸಮಿತಿಯವರು ಏನು ಮಾಡಿದ್ದಾರೆ ಎಂಬುದನ್ನು ಹೇಳುತ್ತಾ ಇದ್ದೇನೆ. Most of the provisions are in accordance with the recommendations of the Report of the Committee. Wherever the Bill is at variance with the recommendations of the Committee, I am opposing it and I am saying my reasons.

ಯಾವುದರಲ್ಲಿ ವ್ಯತ್ಯಾಸ ಇದೆ ಅದನ್ನು ವಿರೋಧಿಸುವುದು ನನ್ನ ಕರ್ತವ್ಯ. ಸಮಿತಿ ವರದಿ ಮಾಡಿದ್ದೇವೆ; ಅದನ್ನು ಒಪ್ಪಿಕೊಳ್ಳಿರಿ ಎಂದು ಸರ್ಕಾರದವರಿಗೆ ಹೇಳುವುದು ನನ್ನ ಕರ್ತವ್ಯ. ತಮಗೊಬ್ಬರಿಗೇ ಅಲ್ಲ ನಾನು ಹೇಳುತ್ತಾ ಇರುವುದು; ಯಾವುದು ಸಮಿತಿಯ ವರದಿಗನುಗುಣವಾಗಿದೆಯೋ ಬಿಲ್‌ನಲ್ಲಿ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಯಾವುದು ಸಮಿತಿಯ ವರದಿಗೆ

ವಿರೋಧವಾಗಿದೆಯೋ ಅದನ್ನು ವಿರೋಧಿಸಬೇಕಾಗದೆ. ನಾನು ಹೇಳಿದ್ದೇ ಸರಿ ಎಂದು ಗೂಟ ಹೊಡೆದು ಇಡಲಿಕ್ಕೆ ನಾನು ಇಚ್ಛಿಸುವುದಿಲ್ಲ.

ಆ ಮೇಲೆ ಶ್ರೀ ಹುಚ್ಚೇಗೌಡರು 'ಪ್ರೊಹಿಬಿಷನ್ ಇಂಟ್ರೊಡ್ಯೂಸ್ ಮಾಡಿದ್ದಕ್ಕೆ ಸೇಲ್ಸ್ ಟ್ಯಾಕ್ಸ್ ಹಾಕಿದರು, ಪ್ರೊಹಿಬಿಷನ್ ಇಲ್ಲದೇ ಇದ್ದ ಮೇಲೆ ಸೇಲ್ಸ್ ಟ್ಯಾಕ್ಸ್ ಏಕೆ ಹಾಕುತ್ತೀರಿ ಎಂದು ರಾಜಗೋಪಾಲಾಚಾರಿಯವರು ಹಿಂದೆ ಕೇಳಿದ್ದಾರೆ' ಎಂದು ಹೇಳಿದರು. ಅನೇಕ ಪ್ರಾಂತಗಳಲ್ಲಿ ಪಾನನಿರೋಧವನ್ನು ಜಾರಿಗೆ ತರಲು ಪ್ರಾರಂಭವೇ ಮಾಡಿಲ್ಲ. ಆದರೂ ಕೂಡ ಸೇಲ್ಸ್ ಟ್ಯಾಕ್ಸು ಆ ಪ್ರಾಂತ್ಯಗಳಲ್ಲೆಲ್ಲಾ ಇದ್ದೇ ಇದೆ. ಈಗ ಪಾನನಿರೋಧ ಮಾಡುವುದಕ್ಕೆ ಎಷ್ಟು ಸಾಧ್ಯವಾಯಿತೋ ಅಷ್ಟು ಮಾಡಿದ್ದೇವೆ. ಮುಂದೂ ಸಹ ಮಾಡುತ್ತಾ ಹೋಗುತ್ತೇವೆ. ಮೊದಲು ಒಂದು ಡಿಸ್ಟ್ರಿಕ್ಟ್‌ನಲ್ಲಿ ಪಾನನಿರೋಧ ಮಾಡಿದರು; ಆ ಮೇಲೆ ಮತ್ತೊಂದು ಡಿಸ್ಟ್ರಿಕ್ಟ್‌ಗೆ ಮುಂದುವರಿಸಿದರು. ಇದೇ ರೀತಿ ಅನುಕೂಲವಾದ ಹಾಗೆಲ್ಲಾ 5-6 ಡಿಸ್ಟ್ರಿಕ್ಟ್‌ಗಳಲ್ಲಿ ಪಾನನಿರೋಧ ಜಾರಿ ಮಾಡಿದ್ದಾರೆ. ಹೀಗಿರುವಾಗ ನಿಮ್ಮ ಉದ್ದೇಶವೇನಿತ್ತು ಅದರಂತೆ ನಡೆಯದೇ ಇದ್ದ ಮೇಲೆ ಟ್ಯಾಕ್ಸ್ ಹಾಕುವುದಕ್ಕೆ ನಿಮಗೆ ಅಧಿಕಾರ ಇಲ್ಲ ಎಂದು ಹೇಳುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಏಕೆಂದರೆ ಪಾನನಿರೋಧ ಜಾರಿಮಾಡದೇ ಇರುವ ಕಡೆಯಲ್ಲೂ ಸಹ ಸೇಲ್ಸ್ ಟ್ಯಾಕ್ಸು ಇದ್ದೇ ಇದೆ. ಇಂಗ್ಲೆಂಡಿನಲ್ಲೂ ಸಹ ಇದು ಇದೆ. ಸೇಲ್ಸ್ ಟಾಕ್ಸ್ ಎನ್ನುವುದು ದೇಶದಲ್ಲಿ ಇತ್ತೀಚೆಗೆ ಬಂದುದು. ವಿಧಿ ಇಲ್ಲದ ಒಂದು ಕಂದಾಯ.

ಆಮೇಲೆ ಕಡಲೇಕಾಯಿ ಬೀಜದ ವಿಷಯ ತೆಗೆದುಕೊಂಡರೆ ಅದರಲ್ಲಿ 2-3 ವ್ಯತ್ಯಾಸ ಇರುವುದು ಹೇಳಿದ್ದಾರೆ. ಕಡಲೇಕಾಯಿ ಬೀಜದ ಮೇಲೆ ಏಕೆ ತೆರಿಗೆ ಹಾಕಿದರು ಎಂದರೆ, ರೈತನ ಮೇಲೆ ಆ ತೆರಿಗೆ ಹಾಕಿಲ್ಲ. It is a purchase-tax. ಯಾರು ಕೇಳುತ್ತಾನೋ ಆತ ಕೊಡಬೇಕೆಂದು ಇದೆ. ಪ್ರಪಂಚದಲ್ಲಿ ಇರುವ ಪ್ರತಿಯೊಂದು ಸೇಲ್ಸ್ ಟ್ಯಾಕ್ಸೂ ಸಹ turnover ಮೇಲೆ ಹಾಕಬೇಕು ಅಂತಲೇ ಇದೆ. ಹಾಗಾದರೆ ಕಡಲೇಕಾಯಿ ಒಂದು ಬಿಟ್ಟುಬಿಟ್ಟರೆ, ಅಕ್ಕಿ, ಬೇಳೆ, ಕೊತ್ತಂಬರಿಬೀಜ, ಹುಣಸೆಹಣ್ಣು, ಇವೆಲ್ಲಾ ರೈತನಿಗೆ ಬೇಡವೇ? ರೈತನು ಉಪಯೋಗಿಸದೇ ಇರುವ ವಸ್ತು ಯಾವುದು ಎಂದು ಕೇಳುತ್ತೇನೆ. ರೈತನ ತಲೆ ಮೇಲೆ ಸ್ವಲ್ಪ ಮಟ್ಟಿಗೆ ಹೊರೆಬೀಳುತ್ತದೆ. ಅದು ಅವನ ಮೇಲೆ ಮಾತ್ರವೇ ಅಲ್ಲ, consumersತಲೆಯ ಮೇಲೆ ಎಲ್ಲರಿಗೂ ಸಹ ಬೀಳುತ್ತದೆ ಎಂಬುದನ್ನು ಒಪ್ಪಿಕೊಳ್ಳಲೇ ಬೇಕು. ಮೊದಲು ಏನಾಗುತ್ತಿತ್ತು? ಆತ ಮಾರಾಟ ಮಾಡಿದ ಮೇಲೆ ಸೇಲ್ಸ್ ಟಾಕ್ಸ್ ಅವನಿಂದ ವಸೂಲು ಮಾಡುತ್ತಾ ಇದ್ದೆವು. ಈಗ ಹಾಗಲ್ಲ, ಮಾರಾಟ ಮಾಡಿದ ಮೇಲೆ ವರ್ಷಾಂತ್ಯದಲ್ಲಿ ಎಷ್ಟು ವ್ಯಾಪಾರ ಮಾಡಿದ್ದಾನೋ ಅದರ ಮೇಲೆ purchase-taxನಂತೆ ವ್ಯಾಪಾರಗಾರರಿಂದ ತೆಗೆದುಕೊಳ್ಳುತ್ತೇವೆ. ಯಾವ ತೆರಿಗೆ ಕೊಟ್ಟರೂ ಹೆಚ್ಚುವುದಿಲ್ಲವೆ? ಟರ್ನ್ ಓವರ್ ಟ್ಯಾಕ್ಸ್ ಕೊಟ್ಟರೆ ಎಲ್ಲದರ ಮೇಲೂ ಹೆಚ್ಚುವುದಿಲ್ಲವೆ? ಯಾವುದೋ ಒಂದು ಮೂಲವನ್ನು ತೆಗೆದುಕೊಂಡು ಕೊನೆಗೆ ಈ ಪರಿಣಾಮವಾಗುತ್ತದೆಂದು ಹೇಳುವುದು ಸರಿಯಲ್ಲ. ಹೊಟೇಲು ವಿಷಯವನ್ನೂ ಚೆನ್ನಾಗಿ ಯೋಚನೆ ಮಾಡಿದ್ದೇವೆ. ಹಿಂದೆ ರೂಪಾಯಿಗೆ 3 ಕಾಸು ತೆರಿಗೆಯಿತ್ತು. ಬಾಕಿ ಕಡೆ ಟರ್ನ್‌ಓವರ್ ಟ್ಯಾಕ್ಸ್ 156¼ ರೂಪಾಯಿಗಳಿದ್ದುದನ್ನು 25 ರೂಪಾಯಿಗಳಿಗೆ ಇಳಿಸಿದ್ದೇವೆ. ಇದನ್ನು ಇಳಿಸಬೇಕಾದ್ದೂ ಧರ್ಮವೆಂದು ವಾದ ಬಂತು. ನಾಳೆ ದಿವಸ ನಾವು ಇಳಿಸಿದರೆ ಜಾಸ್ತಿ ಮಾಡಬಹುದು, 3 ಕಾಸಿರುವುದನ್ನು ಒಂದು ಕಾಸು ಏಕೆ ಮಾಡಬಾರದು? ಅನೇಕ ಕಡೆ ರಿಲೀಫ್ ಕೊಟ್ಟಿರುವಾಗ ಏಕೆ ಹಾಗೆ ಮಾಡಬಾರದೆಂದು ಎಲ್ಲವನ್ನೂ ಯೋಚಿಸಿ ಒಂದು ಸ್ಲ್ಯಾಬ್ ಸಿಸ್ಟಂ ಇಟ್ಟುಕೊಂಡರೆ ಸರಿಹೋಗುತ್ತದೆಂದು ಭಾವಿಸಿ ತಕ್ಕ ತಿದ್ದುಪಡಿ ಮಾಡಬೇಕಾಯಿತು. ಶೇಕಡ ಹತ್ತರಂತೆ ಹೊಟೇಲುಗಳ ಮೇಲೆ ಯಾರು ವಿಧಿಸಿದರು, ಹೇಗೆ ಹಾಕಿದರು ಎಂದು ಬಹಳ ಗಲಾಟೆಯಾಯಿತು. ಈ ಸಂದರ್ಭದಲ್ಲಿ ಶ್ರೀವರ್ನಾಗಯ್ಯರೆಡ್ಡಿಯವರು ಬೃಹಸ್ಪತಿ ಎಂದು ಹೇಳಿದರು. ಆ ವಿಚಾರಕ್ಕೆ ನಾನು ಹೋಗುವುದಿಲ್ಲ. ಆ ಮೇಲೆ ಟೆಕ್ಸ್‌ಟೈಲ್ ಮಿಲ್ಸ್‌ನ ವಿಚಾರದಲ್ಲಿ ಹೇಳುತ್ತಾ ಕೋರ್ಸ್ ಮತ್ತು ಮೀಡಿಯಂ ಬಟ್ಟೆಗಳಿಗೆ 6 ಕಾಸು ದರ ವಿಧಿಸಿರುವುದಕ್ಕೂ ಬಹಳ ಪ್ರತಿಭಟಿಸಿದರು. ರಿಜಿಸ್ಟ್ರೇಷನ್‌ನಿಂದ 12 ಲಕ್ಷ ರೂಪಾಯಿಗಳು ಬರುತ್ತದೆ. ಈ ಬಾಬಿನಲ್ಲಿ ನಷ್ಟವಾಗಿರುವುದನ್ನು ಇದರಿಂದ ಭರ್ತಿ ಮಾಡಬಹುದು ಎಂದು ಹೇಳಿದೆ. ಆದರೆ 25 ರಿಂದ 50ಕ್ಕೆ ಏರಿಸುವುದರಿಂದ ಎಷ್ಟು ಲಕ್ಷ ಬರುತ್ತದೆ, ಹೀಗೆ ರಿವೈಜ್ ಮಾಡುವುದರಿಂದ ಹೆಚ್ಚಾಗಿ ಎಷ್ಟು ಲಕ್ಷ ಬರುತ್ತದೆ, ಎಂದು ಲೆಕ್ಕ ಮಾಡಿ ನೋಡಿದ್ದಾರೆಯೆ? ಸಮಿತಿ ಮಾಡಿರುವುದನ್ನು ಡಬ್ಬಲ್ ಮಾಡಿದ್ದಾರೆ. ಆದರೆ ಒಟ್ಟಿನಲ್ಲಿ ಇದರಿಂದ ಆದಾಯವೆಷ್ಟು ಬರುತ್ತದೆಂಬುದನ್ನು ಹೇಳಿಲ್ಲ. ರಿಜಿಸ್ಟ್ರೇಷನ್‌ನಲ್ಲಿ ನಷ್ಟವಾಗಿರುವುದು ಇದರಿಂದ ಭರ್ತಿಯಾಗಬಹುದೆಂಬ ಅಭಿಪ್ರಾಯವಿದೆ. ಆ ಮೇಲೆ ರಿಜಿಸ್ಟ್ರೇಷನ್ ಮಾಡುವುದನ್ನು ಅಧಿಕಾರಿಗಳು ಸಮಿತಿಯಲ್ಲಿ ವಿರೋಧಿಸಿದರು. ಆ ದಿವಸ ಅಧಿಕಾರಿಗಳ ಅಭಿಪ್ರಾಯವೇನಿತ್ತೆಂಬುದನ್ನು ಹೇಳಬೇಕಾಗಿವೆ. ರಿಜಿಸ್ಟ್ರೇಷನ್‌ಗಾಗಿ ಒಂದು ಅಂಗಡಿ ವರ್ಷಕ್ಕೆ 6 ರೂಪಾಯಿಗಳನ್ನು ಕೊಡಬೇಕೆಂದರೆ ತಿಂಗಳಿಗೆ 8 ಆಣೆ ಬೀಳುತ್ತದೆ. ಇದನ್ನು ವಸೂಲು ಮಾಡುವವರು ಯಾರು? ಹಳ್ಳಿಗಳಿಗೆ ಯಾರು ಇದಕ್ಕಾಗಿ ಹೋಗಬೇಕು? ಹಳ್ಳಿಗಳಿಗೆ ಸೇಲ್ಸ್‌ಟ್ಯಾಕ್ಸ್ ಆಫೀಸರು ನೆಕ್‌ಟೈ, ಸೂಟ್ ಹಾಕಿಕೊಂಡು ಹೇಗೆ ಹೋಗುವುದು? ಹೀಗೆಲ್ಲಾ ಪ್ರಶ್ನೆ ಬಂದಿದೆ. ಇದಕ್ಕೆ ಹೇಳುವುದು ಪಟೇಲ ಶ್ಯಾನುಭೋಗರು ಕಂದಾಯ ವಸೂಲು ಮಾಡುತ್ತಾರೆ, ಅಂಗಡಿ ಕಂದಾಯ ವಸೂಲು ಮಾಡುತ್ತಾರೆ. ಹಾಗೆ ಮಾಡುವಾಗ ಅದರ ಜೊತೆಯಲ್ಲೇ ಈ 6 ರೂಪಾಯಿಗಳನ್ನೂ ಸೇರಿಸಿ ವಸೂಲುಮಾಡಿ ಎಂದು ಹೇಳಿದ್ದರೆ ಆಗುತ್ತಿರಲಿಲ್ಲವೆ? ಇದನ್ನು ಹಿಂದೆಯೇ ಹೇಳಿದ್ದೇವೆ. ಸಮಿತಿ ಅಭಿಪ್ರಾಯಕ್ಕೆ ವಿರೋಧಿಸಬಾರದೆಂಬ ಒಂದು ಬಿಗುಮಾನದಿಂದ ಇದನ್ನು ಆ ದಿವಸ ಒಪ್ಪಿದೆವು. ರಿಜಿಸ್ಟ್ರೇಷನ್ ಫೀಜು ಕೊಟ್ಟರೆ 12 ಲಕ್ಷ ಬರುವುದರಿಂದ ಬೇಕಾದಷ್ಟು ರಿಲೀಫ್ ದೊರೆಯುತ್ತದೆ. ಈಗ ಬಹಳ ಅಂಗಡಿಗಳವರು ಲೈಸೆನ್ಸ್ ತೆಗೆದುಕೊಂಡಿಲ್ಲ. ಅವರು 7,500 ರೂಪಾಯಿಗಳ ಹುಟ್ಟುವಳಿ ತಮಗಿಲ್ಲವೆಂದು ಹೇಳುತ್ತಾರೆ. ಹಾಗಿರುವಾಗ ಅವರ ಅಂಗಡಿಗೆ ಹೋದರೆ ಕಪಾಳಕ್ಕೆ ಹೊಡೆಯುತ್ತಾರೆ. ಇದನ್ನು ತನಿಖೆ ಮಾಡಬೇಕಾದರೆ 7,500 ರೂಪಾಯಿಗಳ ಮೇಲೆ 10,000 ರೂಪಾಯಿಗಳೊಳಗೆ ಉತ್ಪತ್ತಿಯಿರುವವರು ಎಷ್ಟು ಮಂದಿಯಿದ್ದಾರೆಂಬುದನ್ನು ನಾವು ರಿಜಿಸ್ಟರು ಮಾಡಿರಬೇಕು. ಹಾಗೆ ಮಾಡಿದ್ದರೆ ತನಿಖೆ ಮಾಡಿ ಕ್ರಮ ಕೈಗೊಳ್ಳಲು ಅಧಿಕಾರ ಬರುತ್ತದೆಯೇ ಹೊರತು ಇಲ್ಲದಿದ್ದರೆ ಇಲ್ಲ. ರಿಜಿಸ್ಟರು ಮಾಡಿಕೊಂಡಿಲ್ಲ, 7,500 ರೂಪಾಯಿಗಳ ಮೇಲೆ ಬರುವುದಿಲ್ಲ ಎಂದು ಹೇಳಿದರೆ seize ಮಾಡುವುದು ಹೇಗೆ? ಅದಕ್ಕಾಗಿಯೇ ಸಮಿತಿಯು ರಿಜಿಸ್ಟರ್ ಮಾಡಿ

(Sri A. BHEEMAPPA NAIK.)

ಕೊಳ್ಳುವುದು ಒಳ್ಳೆಯದು, ಎಲ್ಲರಿಂದಲೂ ಅಲ್ಪ ಸ್ವಲ್ಪ ಬರಲಿ ಎಂದು ಅಭಿಪ್ರಾಯಪಟ್ಟಿದೆ. ಒಂದು ಕಡೆಯಿಂದ ಇನ್ನೊಂದು ಕಡೆಗೆ ತಂದರೆ ತೊಂದರೆಯಾಗದಂತೆ ಅನುಕೂಲ ಮಾಡಿದೆ. ಕಾಫಿ ವರ್ತಕರು ತಮಗೆ ಸಿಂಗಲ್ ಪಾಯಿಂಟ್ ಬೇಡ, ಮಲ್ಟಿ ಪಾಯಿಂಟ್ ಇರಲಿ, ಅದರಿಂದ ಅನುಕೂಲ ಎಂದು ಹೇಳಿದರು. ಕಾಫಿ ಪ್ಲಾಂಟರುಗಳೆಲ್ಲಾ ಬಂದು ಅವರ ಅಭಿಪ್ರಾಯ ಸೂಚಿಸಿದರು. ಅನಂತರ ತೀರ್ಮಾನಕ್ಕೆ ಬಂದೆವು. ಹಾಗಿರುವಾಗ ಈ ದಿವಸ ಸಿಂಗಲ್ ಪಾಯಿಂಟ್ ಇರಬೇಕಾಗಿತ್ತೆಂದು ಹೇಳುತ್ತಾರೆ. ಶ್ರೀ ಇಮಾಂರವರು ಹಿಂದಿನ ಆಕ್ಟಿನಲ್ಲಿ ಸಿಂಗಲ್ ಪಾಯಿಂಟ್ ಬಟ್ಟೆಗೆ ಇತ್ತು, ಬಾಕಿಯಾದ್ದಕ್ಕೆ ಮಲ್ಟಿ ಪಾಯಿಂಟಿತ್ತು ಎಂದು ಹೇಳಿದರು. ಹಿಂದೆ ಸಿಂಗಲ್ ಪಾಯಿಂಟ್ ಮತ್ತು ಮಲ್ಟಿಪಾಯಿಂಟ್ ಹೇಗಿತ್ತೋ ಈಗಲೂ ಹಾಗೇ ಇದೆ. ಆದರೆ ಎಷ್ಟು ಸಾಧ್ಯವೋ ಅಷ್ಟು ಸಿಂಗಲ್ ಪಾಯಿಂಟಿನಲ್ಲಿ ಹಾಕಿದರೆ stage by stage ತೊಂದರೆಯಾಗುವುದು ತಪ್ಪುತ್ತದೆ. ಸಾಧ್ಯವಿಲ್ಲದಿರುವ ಕಡೆ ಮಲ್ಟಿ ಪಾಯಿಂಟ್‌ನಂತೆ ಹಾಕಬಹುದು ಎಂದು ತೀರ್ಮಾನಕ್ಕೆ ಬಂದಿರುತ್ತಾರೆ. ಆದ್ದರಿಂದ ಸಿಂಗಲ್ ಪಾಯಿಂಟ್ ಹಾಕಿದಾಗ ಮಲ್ಟಿ ಪಾಯಿಂಟ್ ಇರಬೇಕಾಗಿತ್ತೆಂದೂ, ಮಲ್ಟಿಪಾಯಿಂಟ್ ಹಾಕಿದಾಗ ಸಿಂಗಲ್ ಪಾಯಿಂಟ್ ಇರಬೇಕಾಗಿತ್ತೆಂದೂ ಹೇಳಿದರೆ ಹೇಗೆ? ಎಲ್ಲೆಲ್ಲಿ ಯಾವಯಾವುದು ಸಾಧ್ಯವೋ ಅದನ್ನು ಹಾಕಿದೆ. ಬೊಂಬಾಯಿನಲ್ಲಿ ಸಿಂಗಲ್ ಪಾಯಿಂಟ್ ಇದೆಯೆಂದು ಹೇಳಿದರು. ಆದರೆ ಎಲ್ಲಕಡೆಯೂ ಅದೇ ರೀತಿ ಮಾಡಲು ಸಾಧ್ಯವಿಲ್ಲ. ಇಂಗ್ಲೆಂಡಿನಿಂದ ಬರುವ ಪ್ರತಿಯೊಂದು ವಸ್ತುವಿನ ತಯಾರಾಗುವ ಮೂಲಸ್ಥಳ ಅಥವಾ ಸೋರ್ಸ್ ಗೊತ್ತಾಗುತ್ತದೆ. ಹಾಗೆಯೇ ಬೊಂಬಾಯಿ ಮತ್ತು ಮದ್ರಾಸುಗಳಲ್ಲೂ ಗೊತ್ತಾಗಲು ಅವಕಾಶವಿದೆ. ಆದರೆ ಇಲ್ಲಿ ಅನೇಕ ಸಂದರ್ಭಗಳಲ್ಲಿ ಗೊತ್ತಾಗುವುದಿಲ್ಲ. ಮೈಸೂರಿನಲ್ಲಿ ಸಕ್ಕರೆ ಕಾರ್ಖಾನೆಯಿದೆ, ಎರಡು ಮೂರು ಮಾಲುಗಳು ಉತ್ಪತ್ತಿಯಾಗುತ್ತವೆ ಎಂದು ಹೇಳಬಹುದು. ಅಷ್ಟಿದ್ದ ಮಾತ್ರಕ್ಕೇ ಎಲ್ಲಾ ಮೈಸೂರು ಸಂಸ್ಥಾನದಲ್ಲೇ ತಯಾರಾಗಿ, ಮೈಸೂರು ದೇಶದಲ್ಲೇ ಮಾರಾಟವಾಗಿ, ಮೈಸೂರು ದೇಶದಲ್ಲೇ ವಿನಿಯೋಗವಾಗುತ್ತದೆಂದು ಹೇಳಲು ಸಾಧ್ಯವೆ? ಇಲ್ಲಿ ಮಾರಾಟವಾಗುವ ಅನೇಕ ಸಾಮಾನುಗಳಿಗೆ ಮೂಲ ಗೊತ್ತಿಲ್ಲ. ಹಾಗಿರುವಾಗ ಅವನ್ನು ಕೈಬಿಡಿ ಎಂದು ಹೇಳಿದರೆ ಹೇಗೆ? ಹಾಗೆ ಕೈ ಬಿಟ್ಟು ನಮಗೆ ಇಷ್ಟು ಹಣ ಬರುವಂತೆ ಮಾಡಬೇಕಾದರೆ ಈಗ ಒಂದಾಣೆ, 6 ಕಾಸು ದರವೇನಿದೆಯೋ ಅದನ್ನು 4 ಆಣೆಗೆ ಹೆಚ್ಚಿಸಬೇಕಾಗುತ್ತದೆ. ಏಕೆಂದರೆ ಆದಾಯ ಅಗತ್ಯ. ಈಗಲೂ ಕೂಡ ಅನೇಕ ಕಡೆ ಐಶ್ವರ್ಯವಂತರ ಮೇಲೆ, ಅವರು ಉಪಯೋಗಿಸುವ ಪದಾರ್ಥಗಳಾದ ಬಂಗಾರ ಮುಂತಾದುವುಗಳ ಮೇಲೆ ದ್ವಿಗುಣವಾಗಿ ಭಾರ ಹಾಕಿದೆ. ಅಂಥವರ ಮೇಲೆ ಹಾಕಲು ಯಾರದೂ ಅಡ್ಡಿಯಿಲ್ಲ. ಸರ್ಕಾರಕ್ಕೆ ಬರುವ ಆದಾಯ ಬರಬೇಕು. ಸಾಮಾನ್ಯವಾಗಿ ಬಡವರ ಮೇಲೆ ಬೀಳಬಾರದು, ಕನ್ಸ್ಯೂಮರ್ಸ್ ಮೇಲೆ ಬೀಳುವುದನ್ನು ಸರ್ಕಾರಕ್ಕೆ ಕೊಡದೆ ಅನೇಕ ಸಂದರ್ಭಗಳಲ್ಲಿ ಸರಿಯಾಗಿ ಲೆಕ್ಕ ಬರೆಯದೆ ತಪ್ಪಿಸಿಕೊಳ್ಳಲು ಅವಕಾಶಕೊಡಬಾರದು ಎಂದು ಎಲ್ಲಾ ಯೋಚನೆ ಮಾಡಿ ಒಂದು ನಿರ್ಧಾರಕ್ಕೆ ಬಂದಿದೆ. 10 ಸಾವಿರದ ಮೇಲೆ ಉತ್ಪತ್ತಿ ಇರುವವರಿಗೆ ಹಾಕುವುದೇ ಬೇರೆ. ಈಗ 10 ಸಾವಿರದ ಮೇಲೆ 156¼ ರೂಪಾಯಿ ಹಾಕುತ್ತಿದ್ದಾರೆ. ಕನ್ಸ್ಯೂಮರ್ಸ್ ಮೇಲೆ ಹೊರೆ ಬೀಳಬಾರದು, ಆದಾಯ ಹೆಚ್ಚಾಗಿ ಪಡೆಯುವವನ ಮೇಲೆ ಬೀಳಲಿ ಎಂದರೆ ಅದನ್ನೂ ಈ ದಿವಸ ಬೇಡವೆಂದರೆ ಹೇಗೆ? ಅನುಕೂಲವಾಗಿರುವುದು ಬೇಡ, ಪ್ರತಿಕೂಲವಾಗಿರುವುದು ಬೇಕು ಎಂದು ಹೇಳುವುದು ಸೂಕ್ತವಲ್ಲ. ಈಗ ಎಲ್ಲಾ ವಿಚಾರಗಳನ್ನೂ ಕೂಲಂಕಷವಾಗಿ ಪರಿಶೀಲಿಸಿ ಎಲ್ಲ ಪಂಗಡಗಳವರ ಸಲಹೆಯನ್ನೂ ಪಡೆದು ಸೂಕ್ತ ರೀತಿಯಲ್ಲಿ ರಚಿಸಿರುವ ಈ ಮಸೂದೆಯನ್ನು ಸಂಪೂರ್ಣವಾಗಿ ಒಪ್ಪಬೇಕು. ಇದರಲ್ಲೇನಾದರೂ ಲೋಪದೋಷಗಳಿದ್ದರೆ ಬೇಕಾದರೆ ತಿದ್ದುಪಡಿ ಸೂಚಿಸಬಹುದು. ಅದನ್ನು ಬಿಟ್ಟು ತಂದಿರುವುದೇ ಕೆಟ್ಟುದೆಂದು ಹೇಳಿದರೆ ನಿಜವಾಗಿಯೂ ಅದನ್ನು ಸರಿಮಾಡುವುದಕ್ಕಾಗುವುದಿಲ್ಲ.

ಈ ತಿದ್ದುಪಡಿ ಮಸೂದೆಯಿಂದ ಹಿಂದೆ ಜಾರಿಯಲ್ಲಿದ್ದ ಆಕ್ಟಿಗಿಂತಲೂ ಹೆಚ್ಚು ತೊಂದರೆಯಾಗುತ್ತದೆಂದು ಕಂಡುಬಂದರೆ, ಹಿಂದಿನ ಆಕ್ಟನ್ನು ಒಪ್ಪಿಕೊಳ್ಳೋಣ. ಅದು ಇನ್ನೂ repeal ಆಗಿಲ್ಲ. ಈ ಅಂಶವನ್ನು Opposition ನಲ್ಲಿರುವ ಸದಸ್ಯರು ಯೋಚನೆ ಮಾಡಲಿ.

ಶ್ರೀ ಬಿ. ಹುಚ್ಚೇಗೌಡ.—Opposition ನಲ್ಲಿರುವವರು ಮಾತ್ರವೇ ಇದನ್ನು ಪ್ರತಿಭಟಿಸಿಲ್ಲ. ಆ ಕಡೆ ಇರುವವರಲ್ಲಿ ಸಹ ಕೆಲವು ಸದಸ್ಯರು ಇದನ್ನು ಪ್ರತಿಭಟಿಸಿದ್ದಾರೆ.

ಶ್ರೀ ಎ. ಭೀಮಪ್ಪನಾಯಕ್.—ಎಲ್ಲರಿಗೂ ಇದೇ ಜವಾಬು. ನಾನು Opposition ನವರಿಗೆ ಮಾತ್ರವೇ ಇದನ್ನು ತಿಳಿಸುತ್ತಿಲ್ಲ, ಎಲ್ಲರಿಗೂ ತಿಳಿಸುತ್ತಿದ್ದೇನೆ.

ಇನ್ನು rough and medium cloth, fine and superfine cloth ವಿಚಾರ ಪ್ರಸ್ತಾಪಿಸಿದರು. ಈ ವಿಚಾರದಲ್ಲಿ ನನ್ನ ಅಭಿಪ್ರಾಯವಿದು. Handloom cloth, fine and superfine mill cloth ಎಂದು ಬೇರೆ ಬೇರೆಯಾಗಿಟ್ಟುಕೊಳ್ಳಬೇಕು. ಅಲ್ಲದೆ handloom cloth ಗೂ powerloom cloth ಗೂ ತೊಂದರೆ ಉಂಟಾಗಬಾರದು. ಅಲ್ಲದೆ powerloom cloth ಗೆ mill cloth ನಿಂದ ತೊಂದರೆ ಆಗಬಾರದು. ಈ ರೀತಿ ಒಂದಕ್ಕೊಂದು ಹೊಂದಾಣಿಕೆ ಇರುವಂತೆ ತೆರಿಗೆ ವಿಧಾಯಕದ ದರಗಳಲ್ಲಿ ತಕ್ಕ ಸೌಕರ್ಯವನ್ನು ಕಲ್ಪಿಸಬೇಕು. ಇದರ ಜೊತೆಗೆ ಮೈಸೂರು ಸಿಲ್ಕಿಗೆ ಎಲ್ಲೆಲ್ಲಿಯೂ ಹೆಸರು ಬಂದಿದೆ. ಆ ಹೆಸರು ಸ್ವಲ್ಪವೂ ಅಳಿಯಬಾರದು. ಇದಕ್ಕೆ ಸರಿಯಾದ ಬೆಲೆ ಹೊರಗೆ ಸಿಕ್ಕುವಂತೆ ಮಾಡಬೇಕು. ಈ ದೃಷ್ಟಿಯಿಂದ Super Silk Mills ಗೆ ಈ ತೆರಿಗೆಯ ವಿಚಾರದಲ್ಲಿ ವಿನಾಯಿತಿ ದೊರಕಿಸಿದರೂ ಒಳ್ಳೆಯದೆಂದು ಅನ್ನಿಸುತ್ತದೆ.

ಒಟ್ಟಿನಲ್ಲಿ ಸೇಲ್ಸ್‌ಟ್ಯಾಕ್ಸ್ ಸಮಿತಿ ಅಭಿಪ್ರಾಯಗಳು ಸರಿಯಾಗಿವೆ. ಆದರೆ ಅಗರ್‌ಬತ್ತಿ ಮೇಲೆ ಒಂದಾಣೆ ತೆರಿಗೆ ವಿಧಿಸಬೇಕೆಂದು ಸಮಿತಿ ನಿಗದಿ ಮಾಡಿರುವುದು ಜಾಸ್ತಿ, ಇದನ್ನು ಬೇಕಾದರೆ ಶ್ರೀ ಎಂ. ಲಿಂಗಣ್ಣನವರು ಹೇಳಿದಂತೆ ಮೂರು ಕಾಸಿಗೆ ಇಳಿಸುವುದು ಸೂಕ್ತ. ಇದನ್ನು ಸರ್ಕಾರದವರು ಪುನಃ ಪರಿಶೀಲಿಸಬೇಕು. ಹೇಗಿದ್ದರೂ ಈ ವಿಚಾರವೆಲ್ಲಾ ಈಗ ಸೆಲೆಕ್ಟ್ ಕಮಿಟಿಯ ಮುಂದೆ ಹೋಗುವುದರಿಂದ ಅಲ್ಲಿ ಎಲ್ಲವನ್ನೂ ಕೂಲಂಕಷವಾಗಿ ಪರಿಶೀಲನೆ ಮಾಡಿ ಒಂದು ಸಮಾಧಾನಕರವಾದ ವ್ಯವಸ್ಥೆಯನ್ನು ಸರ್ಕಾರದವರು ಮಾಡುತ್ತಾರೆಂದು ನಂಬಿ ಇದಕ್ಕೆ ನನ್ನ ಪೂರ್ಣ ಬೆಂಬಲಕೊಡುತ್ತೇನೆ.

Mr. SPEAKER.—I want to know how many more members are desirous of speaking on this Bill.

(Many members rose.)

Mr. SPEAKER.—So shall we continue the debate today or have it tomorrow?

Sri K. PATTABHIRAMAN (Kolar).—It is really very hard for us to sit after Five, having sat the whole day already.

Mr. SPEAKER.—You must solve the problem.

Sri K. PATTABHIRAMAN.—This is a very stuffy atmosphere in which we have sat from 12 to 5. If you ask us to sit for another few hours, even on humanitarian considerations, it is not good. I will leave it to the Chair.

Mr. SPEAKER.—Unless the House sits on some holiday there is no other day.

Sri K. PATTABHIRAMAN.—Government must oblige us by taking up this Bill on some other day and not after Five. That is a physical impossibility. One other suggestion I will make. To have a session in the morning and again come back at 4, so that we may be away from here in the hot sun.

Mr. SPEAKER.—Shall we have it day after tomorrow?

Sri N. C. NAGAIAH REDDY (Goribidanur).—I want to know if the Heavens would fall by taking up this Bill next month. I cannot understand why there should be so much of hurry.

Sri S. SRINIVASA IYENGAR.—That is a very good suggestion, Sir.

Sri Kadidal MANJAPPA.—No doubt it is a good suggestion. But the Committee has taken some trouble to send the report and we have also placed the Bill before the House. It is better it becomes law before we disperse. If this Bill is referred to a Select Committee, the Committee may have to sign the report before the 30th of this month and then it has to be considered here and then it has to be considered in the Upper House later on. So all this takes time.

Sri K. PATTABHIRAMAN.—Even after emergence from the Select Committee, there may not be smooth sailing as you seem to imagine.

Sri Kadidal MANJAPPA.—After all one day we will sit and dispose of this Bill. On Tuesday, the day after tomorrow, we may continue the discussion on this Bill.

Mr. SPEAKER.—That will suit the House, I think.

SEVERAL MEMBERS.—Yes, yes.

Mr. SPEAKER.—The House will sit day after tomorrow in the morning at 8-30 and again will meet at Four in the afternoon. From Four of the clock till the discussion on the consideration motion closes it will be continued.

The House will now rise for the day to meet tomorrow at 12 NOON.

The House adjourned at Eight of the Clock to meet at Twelve of the Clock on Wednesday, the 24th March 1954.